M.V.C .NO. 1175/2024
RW-1 .
Dated: 23-04-2026.

ಸಾಕ್ಷಿಯನ್ನು ಈ ದಿನ ದಿನಾಂಕ 23-04-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಖ್ಯ ವಿಚಾರಣೆಃ ಎದುರುದಾರನ ಪರವಾಗಿ ಶ್ರೀ ಪಿ ವಿ ಎಮ್ ವಕೀಲರಿಂದಃ

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ಸಾಕ್ಷಿದಾರರು ತಾವು ಹಾಜರ ಪಡಿಸಿದ ಅಧಿಕಾರ ಪತ್ರ ನಿಆರ-1, ವಿಮಾ ಪಾಲಿಸಿಯ ನಕಲು ನಿಆರ-2 ಅಂತಾ ಗುರುತಿಸಲಾಯಿತು .

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಐ ಡಿ ಡಬ್ಲೂ ವಕೀಲರಿಂದಃ

ಪ್ರಸ್ತುತ ಅರ್ಜಿಯಲ್ಲಿ ನಮ್ಮ ವಿಮಾ ಕಂಪನಿಯರಿಗೆ ವಿಮಾ ಪಾಲಸಿ ಪ್ರಕಾರ ಅರ್ಜಿದಾರ 3 ನೇ ಪಕ್ಷಗಾರ ಇರುತ್ತಾನೆ ಎಂದರೆ ನಿಜ. ಮೋಟರ ಸೈಕಲ ಸವಾರನ ಡಿಎಲ್ ಇಲ್ಲ ಎನ್ನುವುದಕ್ಕೆ ಆರ್ ಟಿ ಒ ರವರಿಂದ ವರದಿ ಪಡೆದು ಸಲ್ಲಿಸಿದ್ದಿರಾ ಎಂದರೆ ಇಲ್ಲ. ಆರ್ ಟಿ ಒ ರವರಿಗೆ ಮೋಟರ ಸೈಕಲ ಸವಾರ ಡಿಎಲ್ ಇದೆಯಾ ಇಲ್ಲವೊ ಎಂದು ಕೊರಿ ಅರ್ಜಿ ಸಲ್ಲಿಸಿಲ್ಲ. ಪ್ರಸ್ತುತ ಪ್ರಕರಣದ ಅಪಘಾತ ಕುರಿತು ನಮ ವಿಮಾ ಕಂಪನಿ ಖಾಸಗಿ ತನಿಖೆ ಮಾಡಿಸಿರುತ್ತೇವೆ . ಸದರಿ ತನಿಖೆ ವರದಿ ಪ್ರಸ್ತುತ ಪ್ರಕರಣದಲ್ಲಿ ಸಲ್ಲಿಸಿಲ್ಲ. ಸದರಿ ತನಿಖಾ ವರದಿಯನ್ನು ಮೋಟರ ಸೈಕಲ ಸವಾರ ಚಾಲನಾ ಪತ್ರ ಹೊಂದಿದ್ದ

M.V.C .NO. 1175/2024
RW-1 .
Dated: 23-04-2026.

ವಿಷಯ ಗೊತ್ತಾಗುತ್ತದೆ ಎಂದು ಅದನ್ನು ಉದ್ದೇಶ ಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರ ಪ್ರಸ್ತುತ ಕ್ಲೇಮ ಅರ್ಜಿಯ ಅರ್ಜಿದಾರ 3 ನೇ ಪಕ್ಷಗಾರ ಇರುವುದರಿಂದ ವಿಮಾ ಕಂಪನಿಯು ಪರಿಹಾರ ಹಣ ಕೊಡಲು ಬಾಧ್ಯಸ್ತರು ಇರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲಿಸ ದಾಖಲಾತಿಗಳ ಆಧಾರದ ಮೇಲೆ ಮಾತ್ರ ಮೋಟರ ಸೈಕಲ ಸವಾರ ಡಿಎಲ್ ಹೊಂದಿರಲಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೋಟರ ಸೈಕಲ ಸವಾನರನ ಡಿಎಲ್ ಇದೆಯೊ ಇಲ್ಲವೊ ಎಂದು ತಿಳಿದು ಕೊಳ್ಳಲು ಸಂಬಂದಿಸಿದ ಆರ್ ಟಿ ಒ ರವರಿಂದ ಯಾವುದೇ ಮಾಹಿತಿ ಪಡೆಯಲು ಪ್ರಯತ್ನ ಮಾಡಿಲ್ಲ. ನಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಎದುರುದಾರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 1 ನೇ ಎದುರುದಾರರ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.